# ಗ್ನತಾಂಗ್‌ನಿಂದ ಗ್ಯಾಂಗ್ಟಕ್‌ವರೆಗೆ..

ಇಲ್ಲಿನ ಬಾಬಾ ಮಂದಿರದ ವಿಶೇಷವೆಂದರೆ ಇಲ್ಲಿ ಹರಕೆಯ ರೂಪದಲ್ಲಿ 'ಮಿನರಲ್ ವಾಟರ್'ಅನ್ನು ದೇವರಿಗೆ ಅರ್ಪಿಸುತ್ತಾರೆ! ಆ ಮಿನರಲ್ ವಾಟರ್‌ಅನ್ನು 21 ದಿನಗಳವರೆಗೆ ಅವರ ಮನೆಯ ದೇವರ ಕೋಣೆಯಲ್ಲಿ ಇಟ್ಟು, ಸ್ವಲ್ಪ ಸ್ವಲ್ಪವೇ ಸೇವಿಸುತ್ತಾ ಇದ್ದರೆ ಅವರ ಮನೋಕಾಮನೆಗಳು ಈಡೇರುತ್ತವೆ ಎನ್ನುವ ನಂಬಿಕೆಯೂ ಇದೆ.

■ ಚಿತ್ರ– ಲೇಖನ: **ಸಂಪತ್ ಕುಮಾರ್ ಜೈನ್**



ಪ್ರವಾಸಿಗರ ತಂಡದೊಂದಿಗೆ ಲೇಖಕರು

ಸಿಕ್ಕಿಂ ರಾಜ್ಯದ ಚೀನಾ ಗಡಿ ಭಾಗದಲ್ಲಿರುವ ಒಂದು ಸಣ್ಣ ಹಳ್ಳಿ ಗ್ನತಾಂಗ್. ಇಲ್ಲಿಂದ ಪ್ರಕೃತಿಯ ರಮ್ಯತಾಣಗಳನ್ನು ಸವಿಯುತ್ತಾ ಗ್ಯಾಂಗ್ಟಕ್ ಕಡೆಗೆ ಪ್ರಯಾಣ ಮುಂದುವರಿಸಿದಾಗ ಸುಂದರ ಸರೋವರ ಗೋಚರಿಸಿತು. ಇದನ್ನು ಕುಪುಪ್ ಸರೋವರ ಅಥವಾ ಎಲಿಫೆಂಟ್ ಲೇಕ್ ಎನ್ನುತ್ತಾರೆ. ಸ್ಥಳೀಯ ಭಾಷೆಯಲ್ಲಿ ಬೀಟನ್ ಬೊ ಎಂದೂ ಕರೆಯುತ್ತಾರೆ. ಇದು ಸಿಕ್ಕಿಂ ರಾಜ್ಯದ ಅತ್ಯಂತ ಪವಿತ್ರ ಸರೋವರ ಎನ್ನುವುದು ಒಂದು ನಂಬಿಕೆ. ಜನವರಿಯಿಂದ ಮೇ ತಿಂಗಳವರೆಗೆ ಈ ಸರೋವರ ಸಂಪೂರ್ಣ ಹಿಮಾವೃತ.

ಕುಪುಪ್, ಓಲ್ಡ್ ಚೀನಾ ಸಿಲ್ಕ್‌ರೋಡ್‌ನ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಈ ಸರೋವರದ ಬಲಭಾಗ ನೋಡಲು ಆನೆಯ ಸೊಂಡಿಲಿನ ಹಾಗೆ ಮತ್ತು ಇನ್ನೊಂದು ಭಾಗ ಆನೆಯ ಬಾಲದಂತೆ ಕಾಣುತ್ತದೆ. ಹಾಗೆಂದೇ ಇದಕ್ಕೆ ಎಲಿಫೆಂಟ್ ಲೇಕ್ ಎನ್ನುವ ಹೆಸರು. ಇದಕ್ಕೆ ಹೊಂದಿಕೊಂಡೇ ಪಾಂಗೂಲಾಖಾ ಅಭಯಾರಣ್ಯವಿದೆ. ಇದು ಚೀನಾ ಮತ್ತು ಭೂತಾನ್ ಗಡಿಯನ್ನು ಹಂಚಿಕೊಂಡಿದೆ.